# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 524 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 20-02-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ<br>ಮತ್ತು ಸಂಸ್ಕೃತಿ ಸಚಿವರು |

***

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (5 ವಿತರಣಾ ಕೇಂದ್ರ) ದಲ್ಲಿ ನಿವೃತ್ತಿ ಹೊಂದಿರುವ ನೌಕರರ ಸಂಖ್ಯೆ ಎಷ್ಟು;</td><td>ಜನವರಿ-2023ರ ಅಂತ್ಯಕ್ಕಿರುವಂತೆ, ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿರುವ ಪಿಂಚಣಿದಾರರು 19,995 ಹಾಗೂ ಕುಟುಂಬ ಪಿಂಚಣಿದಾರರು 19,597. ಒಟ್ಟು 39,592.</td></tr>
<tr><td>ಆ)</td><td>ನಿವೃತ್ತಿ ಹೊಂದಿರುವ ನೌಕರರಿಗೆ ಪ್ರತಿ ವರ್ಷ ಪಿಂಚಣಿ ರೂಪದಲ್ಲಿ ಎಷ್ಟು ಹಣವನ್ನು ಪಾವತಿ ಮಾಡಲಾಗುತ್ತಿದೆ;</td><td>ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನಿಂದ ಕಳೆದ 3 ವರ್ಷಗಳಲ್ಲಿ ಪಾವತಿ ಮಾಡಿರುವ ಪಿಂಚಣಿ ಸೌಲಭ್ಯಗಳ ವಿವರ ಈ ಕೆಳಗಿನಂತಿದೆ.<br>(ರೂ.ಕೋಟಿಗಳಲ್ಲಿ)
<table>
<tr><th rowspan="2">ಆರ್ಥಿಕ ವರ್ಷ</th><th colspan="4">ಪಾವತಿ ಮಾಡಿದ ಪಿಂಚಣಿ ಸೌಲಭ್ಯಗಳ ಮೊತ್ತ</th></tr>
<tr><th>ಪಿಂಚಣಿ/ ಕುಟುಂಬ ಪಿಂಚಣಿ</th><th>ಪರಿವರ್ತಿತ ಪಿಂಚಣಿ</th><th>ಉಪದಾನ</th><th>ಒಟ್ಟು</th></tr>
<tr><td>2019-20</td><td>1480.11</td><td>211.86</td><td>193.70</td><td>1885.67</td></tr>
<tr><td>2020-21</td><td>1497.42</td><td>186.18</td><td>166.07</td><td>1849.67</td></tr>
<tr><td>2021-22</td><td>1640.95</td><td>171.07</td><td>166.20</td><td>1978.22</td></tr>
</table></td></tr>
<tr><td>ಇ)</td><td>ಆಯವ್ಯಯದಲ್ಲಿ ನಿವೃತ್ತ ನೌಕರರ ಪಿಂಚಣಿಗಾಗಿ ಇಂತಿಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆಯೇ; ಅಥವಾ ಇಂಧನ ಇಲಾಖೆಗೆ ನಿಗದಿಪಡಿಸಿರುವ ಅನುದಾನದಲ್ಲೇ ಪಿಂಚಣಿ ಹಣವನ್ನು ನೀಡಲಾಗುತ್ತಿದೆಯೇ;</td><td>ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನಿಂದ ಕಳೆದ 3 ವರ್ಷಗಳಲ್ಲಿ ಪಾವತಿ ಮಾಡಿರುವ ಮತ್ತು ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ:<br>(ರೂ. ಕೋಟಿಗಳಲ್ಲಿ)
<table>
<tr><th>ಆರ್ಥಿಕ ವರ್ಷ</th><th>ಪಾವತಿ ಮಾಡಿದ ಪಿಂಚಣಿ ಸೌಲಭ್ಯಗಳ ಮೊತ್ತ</th><th>ಪಿಂಚಣಿ ಪಾವತಿಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನ</th></tr>
<tr><td>2019-20</td><td>1885.67</td><td>1000.00</td></tr>
<tr><td>2020-21</td><td>1849.67</td><td>3000.00 (1000+2000 {ಹಿಂದಿನ ಬಾ ಕಿ})</td></tr>
<tr><td>2021-22</td><td>1978.22</td><td>500.00</td></tr>
<tr><td>2022-23 (ಜನವರಿ-23 ರವರೆಗೆ)</td><td>1741.30</td><td>ಯಾವುದೇ ಮೊತ್ತವನ್ನು ಬಿಡುಗಡೆ ಮಾಡಿರುವುದಿಲ್ಲ</td></tr>
</table>
<u>ಷರಾ</u>: ಪಿಂಚಣಿ ಸೌಲಭ್ಯಗಳ ಮೊತ್ತದಲ್ಲಿ ಪಿಂಚಣಿ/ಕುಟುಂಬ ಪಿಂಚಣಿ, ಪರಿವರ್ತಿಕ ಪಿಂಚಣಿ ಹಾಗೂ ಉಪದಾನದ ಮೊತ್ತಗಳು ಒಳಗೊಂಡಿರುತ್ತದೆ.</td></tr>
</table>

| | | |
|---|---|---|
| ಈ) | ವಿದ್ಯುತ್ ಸರಬರಾಜು ಕಂಪನಿಗಳ ಸಿಬ್ಬಂದಿ ವರ್ಗದವರಿಗೆ ನೀಡಲಾಗುವ ನಿವೃತ್ತಿ ವೇತನದ ಮೊತ್ತದ ಹೆಸರಿನಲ್ಲಿ ಅನಗತ್ಯವಾಗಿ ವಿದ್ಯುತ್ ದರ ಹೆಚ್ಚಿಸಲು ರಾಜ್ಯ ಸರ್ಕಾರ ಮುಂದಾಗಿದೆಯೇ ಹಾಗೂ ಯಾವುದಾದರೂ ಹೊಸ ಆದೇಶವನ್ನು ಹೊರಡಿಸಲು ಸರ್ಕಾರ ಸಿದ್ಧತೆ ಮಾಡಿಕೊಳ್ಳಲಾಗಿದೆಯೇ; | ರಾಜ್ಯ ಸರ್ಕಾರವು ರಾಜ್ಯದ ಆಯವ್ಯಯದ ಮಿತಿಯಲ್ಲಿಯೇ ಸರ್ಕಾರದ ಎಲ್ಲ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅನುದಾನ ಒದಗಿಸಬೇಕಾಗಿರುವುದರಿಂದ, ಟ್ರಸ್ಟ್‌ಗೆ ಪ್ರತಿ ಆರ್ಥಿಕ ವರ್ಷ ಪಾವತಿಸಬೇಕಿರುವ ಪಿಂಚಣಿ ವಂತಿಗೆ ಹಾಗೂ ಹಿಂದಿನ ವರ್ಷಗಳ ವಂತಿಗೆ ಬಾಕಿಯನ್ನು ಬಿಡುಗಡೆಗೊಳಿಸಲು ಕಷ್ಟ ಸಾಧ್ಯವಾಗಿರುತ್ತದೆ ಹಾಗೂ ಕವಿಮಂ/ಕವಿಪ್ರನಿನಿ/ ವಿಸಕಂಪನಿಗಳಲ್ಲಿ ಸಲ್ಲಿಸಿದ ಸೇವೆಗಾಗಿ ಪಿಂಚಣಿದಾರರ ಪಿಂಚಣಿ ವೆಚ್ಚವನ್ನು ಸರ್ಕಾರ ಭರಿಸುವ ಬದಲು ಪ್ರಧಾನ ಉದ್ಯೋಗದಾತರಾದ ಕವಿಪ್ರನಿನಿಯು ಜಕಾತಿಯಲ್ಲಿ ಬೇಡಿಕೆ ಮಾಡುವುದು ಸೂಕ್ತವಾಗಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ. ಎನರ್ಜಿ/168/ಪಿಎಸ್‌ಆರ್/2022 ದಿನಾಂಕ 15.11.2022 ಮತ್ತು ಸದರಿ ಆದೇಶದ ತಿದ್ದುಪಡಿ ದಿನಾಂಕ 24.11.2022ರಲ್ಲಿ ಈ ಕೆಳಗಿನಂತೆ ಆದೇಶಿಸಿದೆ.<br>1. ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ) ಉದ್ಯಮಗಳು ಮತ್ತು ಅದರ ಸಿಬ್ಬಂದಿ ಮತ್ತು ವಿದ್ಯುಚ್ಛಕ್ತಿ ವಿತರಣ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವರ್ಗಾವಣೆ) ನಿಯಮಗಳು 2002ರ ನಿಯಮ 4(13)(1)ಕ್ಕೆ ತಿದ್ದುಪಡಿ ಆದೇಶ ಹೊರಡಿಸುವುದು.<br>2. ಸರ್ಕಾರದಿಂದ ಕವಿಪ್ರನಿನಿ ಮತ್ತು ವಿಸಕಂಗಳ ಪಿ&ಜಿ ಟ್ರಸ್ಟ್‌ಗೆ ಭರಿಸಬೇಕಾಗಿರುವ ಪಿಂಚಣಿ ವಂತಿಗೆ ಬಾಬ್ತನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಆರ್ಥಿಕ ವರ್ಷ 2023-24ನೇ ಸಾಲಿನಿಂದ ಮುಂದಿನ ಆದೇಶದವರೆಗೆ ಜಕಾತಿಯ ದರದಲ್ಲಿ ಕ್ಲೈಮ್ ಮಾಡುವುದು/ ವರ್ಗಾಯಿಸುವುದು.<br>3. ಸರ್ಕಾರದಿಂದ ಪಾವತಿಸಬೇಕಾಗಿರುವ 2021-22 ರಿಂದ 2022-23ರವರೆಗಿನ ಬಾಕಿ ಪಿಂಚಣಿ ವಂತಿಗೆ ಮೊತ್ತ ರೂ. 3,353.27 ಕೋಟಿಗಳನ್ನು 2023-24ನೇ ಸಾಲಿನಿಂದ ಮುಂದಿನ ಮೂರು ಸಮಾನ ಕಂತುಗಳಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಜಕಾತಿಯ ದರದಲ್ಲಿ ಕ್ಲೈಮ್ ಮಾಡುವುದು/ ವರ್ಗಾಯಿಸುವುದು. |
| ಉ) | ಹಾಗಿದ್ದಲ್ಲಿ, ಗ್ರಾಹಕರು ಯಾವ ಆಧಾರದ ಮೇಲೆ ಹೆಚ್ಚುವರಿಯಾಗಿ ಹಣವನ್ನು ಪಾವತಿಸಬೇಕು; ಇದರ ಹೊರೆಯನ್ನು ಯಾವ ಕಾರಣಕ್ಕಾಗಿ ಗ್ರಾಹಕರ ಮೇಲೆ ಹೊರೆ ಹಾಕಲಾಗುತ್ತಿದೆ; | i) ಕವಿಪ್ರನಿನಿ ನಿಗಮೀಕರಣ ಪೂರ್ವದಲ್ಲಿ ಅಂದರೆ ಕವಿಮಂನಲ್ಲಿ ಪಿಂಚಣಿ ಸವಲತ್ತುಗಳನ್ನು ಸಿಬ್ಬಂದಿ ವೆಚ್ಚದಲ್ಲಿ ಸೇರಿಸಿ, ಜಕಾತಿಯಿಂದಲೇ ವಸೂಲಾತಿ ಮಾಡುವ ಕ್ರಮವನ್ನು ಅನುಕರಿಸಲಾಗುತ್ತಿತ್ತು. ಪಿಂಚಣಿ ವೆಚ್ಚಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಅನುದಾನ/ಸಹಾಯಧನವನ್ನು ಒದಗಿಸಲಾಗುತ್ತಿರಲಿಲ್ಲ. ಕವಿಪ್ರನಿನಿಯನ್ನು ಪುನರ್ರಚಿಸಿ ವಿಸಕಂಗಳು ರಚನೆಯಾಗುವ ಮಧ್ಯಂತರ ಅವಧಿ(1999 ರಿಂದ 2002)ಯಲ್ಲಿ ಪಿಂಚಣಿ ಪಾವತಿಗಾಗಿ ಸರ್ಕಾರವು ಅನುದಾನವನ್ನು ಒದಗಿಸಿರುತ್ತದೆ.<br>ii) ಸರ್ಕಾರ, ಕವಿಮಂ ಮತ್ತು ನೌಕರರ ಸಂಘಗಳ ನಡುವಿನ ತ್ರಿಪಕ್ಷೀಯ ಒಪ್ಪಂದದ ಕಂಡಿಕೆ (d) ದಲ್ಲಿ ಸರ್ಕಾರವು ಪಿಂಚಣಿ ಪಾವತಿಯನ್ನು ಖಾತ್ರಿ ಪಡಿಸಿದ್ದು ಹಾಗೂ ಎರಡನೇ ವರ್ಗಾವಣೆ ಯೋಜನೆ ನಿಯಮ 2002ರ ನಿಯಮ (4) ಉಪನಿಯಮ 13(1)ರಲ್ಲಿ ಪಿಂಚಣಿ ಪಾವತಿಗೆ ಸೂಕ್ತ ವ್ಯವಸ್ಥೆ (Appropriate arrangements) ಮಾಡಲು ಅವಕಾಶ ಕಲ್ಪಿಸಲಾಗಿದೆ.<br>ಇದಕ್ಕನುಸಾರ, ಕವಿಪ್ರನಿನಿ/ವಿಸಕಂಗಳ ಸಿಬ್ಬಂದಿಗಳ ಪಿಂಚಣಿ ಮೊತ್ತವನ್ನು (ಸರ್ಕಾರದ ಭಾಗ) ಜಕಾತಿಯಲ್ಲಿ ಸೇರಿಸಿ ಕ್ಲೇಮು ಮಾಡುವಂತೆ ಸೂಚಿಸಲು, ಸರ್ಕಾರವು ಅಧಿಕಾರ ಹೊಂದಿರುತ್ತದೆ. |

| | | |
|---|---|---|
| | | iii) ಸರ್ಕಾರವು ರಾಜ್ಯದ ಆಯವ್ಯಯದ ಮಿತಿಯಲ್ಲಿಯೇ ಸರ್ಕಾರದ ಎಲ್ಲ ಕಾರ್ಯಕ್ರಮ / ಯೋಜನೆಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ಪ್ರಸಕ್ತ ಆರ್ಥಿಕ ವರ್ಷದ ಆರ್ಥಿಕ ಮಿತಿಯಲ್ಲಿಯೇ ಆಯವ್ಯಯದಲ್ಲಿ ಹಂಚಿಕೆ ಮಾಡಿ ಎಲ್ಲಾ ಕಾರ್ಯಕ್ರಮ / ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗೆ ಪ್ರತಿ ಆರ್ಥಿಕ ವರ್ಷದಲ್ಲಿ ಪಾವತಿಸಬೇಕಾಗಿರುವ ಪಿಂಚಣಿ ವಂತಿಗೆ (ಸರ್ಕಾರದ ಭಾಗದ ಮೊತ್ತ) ಹಾಗೂ ಹಿಂದಿನ ವರ್ಷಗಳ ವಂತಿಗೆ ಬಾಕಿಯನ್ನು ಬಿಡುಗಡೆಗೊಳಿಸಲು ಕಷ್ಟ ಸಾಧ್ಯವಾಗಿರುತ್ತದೆ.<br>iv) ಈ ಹಿನ್ನೆಲೆಯಲ್ಲಿ ಕ.ವಿ.ಪ್ರ.ನಿ.ನಿ ನಿಗಮೀಕರಣ ಪೂರ್ವದಲ್ಲಿ ಅಂದರೆ, ಕ.ವಿ.ಮಂ. ನಲ್ಲಿ ಪಿಂಚಣಿ ಸವಲತ್ತುಗಳನ್ನು ಸಿಬ್ಬಂದಿ ವೆಚ್ಚದಲ್ಲಿ ಸೇರಿಸಿ, ಜಕಾತಿಯಿಂದಲೇ ವಸೂಲಾತಿ ಮಾಡುವ ಕ್ರಮವನ್ನು ಅನುಸರಿಸಲಾಗಿದಂತೆಯೇ ಪ್ರಸ್ತುತ ಸರ್ಕಾರದಿಂದ ಭರಿಸಬೇಕಾಗಿರುವ ಪಿಂಚಣಿ ವೆಚ್ಚವನ್ನು (ಸರ್ಕಾರದ ಭಾಗದ ಮೊತ್ತ) ಸರ್ಕಾರ ಭರಿಸುವ ಬದಲು ಪ್ರಧಾನ ಉದ್ಯೋಗದಾತರಾದ ಕ.ವಿ.ಪ್ರ.ನಿ.ನಿ ಯು ಜಕಾತಿಯಲ್ಲಿ ಬೇಡಿಕೆ ಮಾಡುವುದು ಅನಿವಾರ್ಯವಾಗಿರುವುದನ್ನು ಪರಿಗಣಿಸಿ, ರಾಜ್ಯ ಸರ್ಕಾರವು Section 57(2)(b) of Karnataka Electricity Reforms Ordinance 1999 (Karnataka Act 25 of 1999) ರಲ್ಲಿನ ಅಧಿಕಾರವನ್ನು ಬಳಸಿಕೊಂಡು Karnataka Electricity Reforms (Transfer of undertaking of KPTCL and its personnel to Electricity Distribution and retail supply companies), Rules - 2002 ನಿಯಮ 4(13)(1) ಕ್ಕೆ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ ಹಾಗೂ ವಿದ್ಯುತ್ ಕಾಯ್ದೆ- 2003 ರಲ್ಲಿ ಪಿಂಚಣಿ ವೆಚ್ಚವನ್ನು ಜಕಾತಿಯಲ್ಲಿ ಸೇರ್ಪಡೆ ಮಾಡಲು ಯಾವುದೇ ಪ್ರತಿಬಂಧವನ್ನು ವಿಧಿಸಿರುವುದಿಲ್ಲ. |

ಸಂಖ್ಯೆ: ಎನರ್ಜಿ 47 ಇಬಿಎಸ್ 2023

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು